ಸುಮಾರು ೫೨ ಎಕರೆ ಕೆರೆ ಇದ್ದ ಜಾಗವನ್ನು ಕೇಳಿರಂವುದು ನಿಜವಲ್ಲವೇ, ತಾಂತ್ರಿಕ ಅಡಚಣೆ ಇದೆ ಎಂದು ತಿರಸ್ಕರಿಸಿರಿವುದು ನಿಜವಲ್ಲವೇ, ಸಂಪೂರು ೫ ಎಕರೆ ಜಾಗ ವಿದ್ಯಾ ಇಲಾಖೆಯ ವಶದಲ್ಲಿದೆ, ಅದರಲ್ಲಿ ಮಾಡಿದರೆ ಅನುಕೂಲ ಎಂದು ಸಾರ್ವಜನಿಕರಿಂದ ಮನವಿ ಬಂದಿದೆ, ಆದ್ದರಿಂದ ಜನರ ಜೊತೆ ಸಮಾಲೋಚನೆ ಮಾಡಿ ಮುಂದೆ ಅಲ್ಲಿ ಬಸ್‌ಸ್ಟ್ಯಾಂಡ್ ಮಾಡುತ್ತೀರಾ ?

ಶ್ರೀ ಪಿ.ಜಿ.ಆರ್. ಸಿಂಧ್ಯ.—ಸ್ಥಳೀಯ ಶಾಸಕರಾದ ಹಾಗೂ ಮಂತ್ರಿಗಳಾಗಿರತಕ್ಕ ಮಾನ್ಯ ಮಲ್ಲಪ್ಪನವರು ಇಲ್ಲೇ ಇದ್ದಾರೆ. ನಾನು ಆ ಜಾಗಕ್ಕೆ ಹೋಗಿದ್ದೆ. ಈಗ ಇರತಕ್ಕ ಜಾಗ ಚಿಕ್ಕದು ದೊಡ್ಡ ಬಸ್‌ನಿಲ್ದಾಣ ಕಟ್ಟಬೇಕೆಂದು ಶಾಸಕರು, ಸ್ಥಳೀಯರು ಬಹಳ ಹಿಂದೆ ವರದಿ ಮಾಡಿದ್ದರು. ಸಾರ್ವಜನಿಕರಲ್ಲಿ ಅಲ್ಲಿರತಕ್ಕ ಊರು ಮತ್ತು ಕೋಟೆಯ ಭಾಗದ ಬಗ್ಗೆ ಭಿನ್ನಾಭಿಪ್ರಾಯ ಇರತಕ್ಕದ್ದು ನಿಜ, ಆದ್ದರಿಂದ, ಎಲ್ಲರಿಗೂ ಸಮರ್ಪಕವಾಗಿರತಕ್ಕ ರೀತಿಯಲ್ಲಿ ಲೋಕೋಪಯೋಗಿ ಇಲಾಖೆಯಿಂದ ಜಾಗವನ್ನು ನಾವು ಈಗಾಗಲೇ ತೆಗೆದುಕೊಂಡಿದ್ದೇವೆ. ಅದು ಈಗಾಗಲೇ ನಮ್ಮ ವಶಕ್ಕೆ ಬಂದಿದೆ. ಅದರಿಂದ ಎಲ್ಲರಿಗೂ ಸಮಾಧಾನವಾಗಬಹುದು. ವರ್ಷಕ್ಕೆ ಮೂರು ಸಾವಿರ ರೂಪಾಯಿಂಗಳ ಲೀಸ್ ಪ್ರಕಾರ ಇಪ್ಪತ್ತೈದು ವರ್ಷಗಳವರೆಗೆ ಲೋಕೋಪಯೋಗಿ ಇಲಾಖೆಯವರು ಆ ಜಾಗವನ್ನು ನಮ್ಮ ವಶಕ್ಕೆ ಕೊಟ್ಟಿದ್ದಾರೆ. ಕೆಲಸ ಕೂಡ ಈಗಾಗಲೇ ಪ್ರಾರಂಭವಾಗಿದೆ.

ಸಣ್ಣ ಉಳಿತಾಯ ಯೋಜನೆಯ ಬಗ್ಗೆ

೧೨೮೮. ಶ್ರೀ ಜ್ಞಾನದೇವ ದೊಡ್ಡವೇಟಿ (ರೋಣ).—ಮಾನ್ಯ ಸಣ್ಣ ಉಳಿತಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಣ್ಣ ಉಳಿತಾಯ ಯೋಜನೆಯಿಂದ ರಾಜ್ಯದಲ್ಲಿ ಇದುವರೆವಿಗೂ ಸಂಗ್ರಹಿಸಿದ ಹಣ ಎಷ್ಟು ?

ಆ) ಸಣ್ಣ ಉಳಿತಾಯ ಯೋಜನೆಯ ಪ್ರಚಾರಕ್ಕಾಗಿ ಕೈಗೊಂಡ ಕ್ರಮಗಳೇನು ? ಹಾಗೂ ಅದಕ್ಕೆ ಖರ್ಚಾದ ಹಣ ಎಷ್ಟು ? (೩೧ನೇ ಜುಲೈ ೮೭ರವರೆಗೆ)

ಇ) ಈ ಕೈಗೊಂಡ ಕ್ರಮಗಳಿಂದ ಉಳಿತಾಯದಲ್ಲಿ ಏನಾದರೂ ಪ್ರಗತಿಯು ಕಂಡು ಬಂದಿದೆಯೇ ? ಬಂದಿದ್ದರೆ ಎಷ್ಟು ?

ಶ್ರೀ ವೀರಣ್ಣ (ಸಣ್ಣ ಉಳಿತಾಯ ಖಾತೆ ಮಂತ್ರಿಗಳು).—

ಅ) ಸಣ್ಣ ಉಳಿತಾಯ ಯೋಜನೆಯಿಂದ ರಾಜ್ಯದಲ್ಲಿ ಜುಲೈ ೮೭ರ ಅಂತ್ಯದವರೆಗೆ ಸಂಗ್ರಹವಾದ ಮೊತ್ತ ೨೫೫೫.೯೮ ಕೋಟಿ ರೂಪಾಯಿಗಳು.

ಆ) ಸಣ್ಣ ಉಳಿತಾಯ ಪ್ರಚಾರಕ್ಕಾಗಿ ವ್ಯಾಪಕ ಕ್ರಮಗಳನ್ನು ಕೈಗೊಂಡಿದೆ. ಮುಖ್ಯವಾಗಿ ಕೈಗೊಂಡ ಕ್ರಮಗಳು ಈ ಕೆಳಗೆ ಕಾಣಿಸಿದಂತೆ ಇವೆ.

೧) ಕರಪತ್ರಗಳು/ಬಿಡ್ತಿ ಪತ್ರಗಳ ವಿತರಣೆ

೨) ನಮೂನೆಗಳು/ಪಾಸ್ ಪುಸ್ತಕಗಳ ಸರಬರಾಜು

೩) ಪತ್ರಿಕೆಗಳಲ್ಲಿ ಜಾಹೀರಾತು

೪) ಸಿನಿಮಾ ಸ್ಲೈಡು/ಚಲನಚಿತ್ರಗಳ ಮೂಲಕ ಪ್ರಚಾರ

೫) ಸಣ್ಣ ಉಳಿತಾಯ ಸಂಗ್ರಹಣೆಗಾಗಿ ಪಾದಯಾತ್ರೆ ಶಿಬಿರಗಳ ಏರ್ಪಾಡು

೬) ವಸ್ತು ಪ್ರದರ್ಶನಗಳಲ್ಲಿ ಸಣ್ಣ ಉಳಿತಾಯ ಪ್ರಚಾರ

೭) ಬೋರ್ಡಿಂಗ್/ವಾಲ್ ಪೈಂಟಿಂಗ್‌ಗಳ ಮೂಲಕ ಪ್ರಚಾರ

೮) ಸಣ್ಣ ಉಳಿತಾಯ ಕ್ಯಾಲೆಂಡರ್‌ಗಳ ವಿತರಣೆ

೯) ಸಣ್ಣ ಉಳಿತಾಯ ಕುರಿತು ಪತ್ರಿಕಾಗೋಷ್ಠಿ ಚರ್ಚಾ ಗೋಷ್ಠಿ ಏರ್ಪಾಡು

೧೦) ಗಣನೀಯವಾಗಿ ಸಣ್ಣ ಉಳಿತಾಯ ಸಂಗ್ರಹಣೆ ಮಾಡಿದ ಅಧಿಕಾರಿಗಳಿಗೆ/ಸಮೂಹದ ಮುಖಂಡರಿಗೆ/ಸಂಘ ಸಂಸ್ಥೆಗಳಿಗೆ/ಏಜೆಂಟರುಗಳಿಗೆ/ಪ್ರೋತ್ಸಾಹ ಬಹುಮಾನ

೧೧) ಇಂದಿರಾ ವಿಕಾಸ ಪತ್ರ, ರಾಷ್ಟ್ರೀಯ ಉಳಿತಾಯ ಪತ್ರಗಳನ್ನು ಖರೀದಿಸಿದವರಿಗೆ ಜಿಲ್ಲಾವಾರು ಪ್ರೋತ್ಸಾಹಕ ಬಹುಮಾನ ಯೋಜನೆ.

ಈ ಸಾಲಿನಲ್ಲಿ ಜುಲೈ ೩೧ರವರೆಗೆ ರೂ. ೧೨೫.೭೩ ಲಕ್ಷ ಮೆಚ್ಚವಾಗಿರುತ್ತದೆ.

೩) ಗಮನಾರ್ಹ ಪ್ರಗತಿ ಕಂಡು ಬಂದಿದೆ. ೧೯೫೬-೫೭ನೇ ಸಾಲಿನಲ್ಲಿ ಆದ ಸಂಗ್ರಹಣೆ ೪.೭೭ ಕೋಟಿ ರೂಪಾಯಿಗಳಾದರೆ ೧೯೮೬-೮೭ನೇ ಸಾಲಿನಲ್ಲಿ ೪೮೮.೪೮ ಕೋಟಿ ರೂಪಾಯಿಗಳ ಸಂಗ್ರಹಣೆಯಾಗಿದೆ. ೧೯೮೭-೮೮ನೇ ಸಾಲಿನ ೪ ತಿಂಗಳ ಅಂದರೆ ಜುಲೈ ೮೭ರವರೆಗಿನ ಸಂಗ್ರಹಣೆ ೧೧೫.೭೨ ಕೋಟಿ ರೂಪಾಯಿಗಳಂ

ಶ್ರೀ ಜ್ಞಾನದೇವ ಎನ್. ದೊಡ್ಡಮೇಟಿ.—ಮಾನ್ಯ ಅಧ್ಯಕ್ಷರೆ, ಇವರಲ್ಲಿ ಕೇಂದ್ರಸರ್ಕಾರಕ್ಕೆ ಎಷ್ಟು ಹಣ ಹೋಗುತ್ತದೆ ? ಅವರಿಂದ ರಾಜ್ಯ ಸರ್ಕಾರಕ್ಕೆ ಬೋನಸ್ ಹಣ ಎಷ್ಟು ಬಂದಿದೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ವೀರಣ್ಣ.—ಸಣ್ಣ ಉಳಿತಾಯದಲ್ಲಿ ಸಂಗ್ರಹಣೆ ಆದ ಹಣವೆಲ್ಲ ಕೇಂದ್ರ ಸರ್ಕಾರಕ್ಕೆ ಹೋಗುತ್ತದೆ. ಸಂಗ್ರಹಣೆ ಮಾಡಿ ನಿವ್ವಳ ಹಣದಲ್ಲಿ ಮೂರನೆಯ ಎರಡು ಭಾಗ ರಾಜ್ಯ ಸರ್ಕಾರಕ್ಕೆ ಸಾಲದ ರೂಪದಲ್ಲಿ ಕೇಂದ್ರ ಸರ್ಕಾರ ಬಿಡುಗಡೆ ಮಾಡುತ್ತದೆ. ಕರ್ನಾಟಕ ರಾಜ್ಯಕ್ಕೆ ೧೯೮೫-೮೬ರಲ್ಲಿ ೯ ಕೋಟಿ ೫೦ ಲಕ್ಷ ರೂಪಾಯಿಗಳನ್ನು ಬೋನಸ್ ಹಣವೆಂದು ಬಿಡುಗಡೆ ಮಾಡಿದೆ ಇದು ಕರ್ನಾಟಕ ರಾಜ್ಯದ ಒಟ್ಟಾರೆ ಮಂತ್ರಿ ನಿವ್ವಳದ ಉತ್ತಮ ಸಂಗ್ರಹಣೆಗೆ ನೀಡಿದ ಹಣ.

ರಾಜ್ಯದಲ್ಲಿ ಸಾರಿಗೆ ಸೌಲಭ್ಯಗಳು

೮೯. **ಶ್ರೀ ಎ. ಕೃಷ್ಣಪ್ಪ** (ವರ್ತೂರು).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ನಗರದಲ್ಲಿ ಸಾರಿಗೆ ಸೌಲಭ್ಯ ಕೋರಿ ನೂತನವಾಗಿ ಬಂದ ಬೇಡಿಕೆಗಳೆಷ್ಟು ?

ಆ) ಇದರಲ್ಲಿ ಎಷ್ಟು ಮಾರ್ಗಗಳನ್ನು ನೀಡಲು ಸಾರಿಗೆ ಸಂಸ್ಥೆ ಯೋಜನೆ ಮಾಡಿದೆ ?

ಇ) ರಾಜ್ಯದಲ್ಲಿ ಸಾರಿಗೆ ಸೌಲಭ್ಯ ಕೋರಿ ನೂತನವಾಗಿ ಬಂದ ಬೇಡಿಕೆಗಳೆಷ್ಟು ?

ಈ) ಇದರಲ್ಲಿ ಎಷ್ಟು ಮಾರ್ಗಗಳನ್ನು ನೀಡಲಂ ಸಾರಿಗೆ ಸಂಸ್ಥೆ ಯೋಜನೆ ಮಾಡಿದೆ ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಮಂತ್ರಿಗಳು).—

ಅ) ೧-೨-೮೬ ರಿಂದ ೩೧-೭-೮೭ರವರೆಗಿನ ಅವಧಿಯಲ್ಲಿ ಬೆಂಗಳೂರು ನಗರದಿಂದ ಶಾಸಕರು ವಿಧಾನ ಪರಿಷತ್ತಿನ ಸದಸ್ಯರು ಸಚಿವರುಗಳು ಹಾಗೂ ಲೋಕಸಭಾ ಸದಸ್ಯರುಗಳಿಂದ ೨೩೭ ಬೇಡಿಕೆಗಳು, ಸಲಹೆಗಳು ಬಂದಿದೆ.

ಆ) ಈ ಪೈಕಿ ೧೦೭ ಸಲಹೆಗಳನ್ನು ಕಾರ್ಯಗತಗೊಳಿಸಲಾಗಿದೆ. ಸುಮಾರು ೬೧ ಸಲಹೆಗಳನ್ನು ಕಾರ್ಯಗತಗೊಳಿಸಲು ಪ್ರಯತ್ನ ಮಾಡಲಾಗುತ್ತಿದೆ, ಮಿಕ್ಕ ೪೯ ಸಲಹೆಗಳನ್ನು ಕಾರ್ಯಗತ ಮಾಡಲು ಸಾಧ್ಯವಿಲ್ಲ.

ಇ) ಮತ್ತು ಈ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಸೇವಾಸಂಸ್ಥೆಯಾಗಿದ್ದು ನೂರಾರು ಬೇಡಿಕೆಗಳು ಬರುತ್ತವೆ. ಸಾಧ್ಯತೆ ವರದಿಯ (ಫೀಸಿಬಿಲಿಟಿ ರಿಪೋರ್ಟ್) ಆಧಾರದ ಮೇಲೆ ಈ ಬೇಡಿಕೆಗಳನ್ನು ಕಾರ್ಯಗತ ಮಾಡಲಾಗುತ್ತದೆ.

ಶ್ರೀ ಎ. ಕೃಷ್ಣಪ್ಪ.—ಮಿಕ್ಕ ೬೧ ಸಲಹೆಗಳನ್ನು ಯಾವಾಗ ಕಾರ್ಯಗತ ಮಾಡುತ್ತೀರಿ ? ಎಷ್ಟು ದಿವಸದಲ್ಲಿ ಕಾರ್ಯಗತ ಮಾಡುತ್ತೀರೆಂಬುದನ್ನು ಹೇಳುತ್ತೀರಾ ?